
ಕವಿತೆ



ಜಿ.ವಿ. ಆನಂದಮೂರ್ತಿ

ಕಲೆ: ವಿ.ಎಂ. ಮಂಜುನಾಥ್



# ಗಾಜಾಪಟ್ಟಿಯಲ್ಲಿ ಕಂಡ ದೃಶ್ಯಗಳು

## ದೃಶ್ಯ: ಒಂದು

ಎದೆಗೆ ಆತುಕೊಂಡಿರುವ ನನ್ನ ಎಳೆಗೂಸಿಗೆ
ಹಾಲುಣಿಸುತ್ತಿರುವೆ
ಎಸೆಯಬೇಡಿ ಬಾಂಬು ಕ್ಷಿಪಣಿಗಳನ್ನು

ಪಕ್ಕದ ಗೋರಿಯ ಒಳಗೆ ಮಲಗಿರುವ
ತಾಯಿಯನ್ನು ಕೂಗಿ ಎಬ್ಬಿಸುತ್ತಿದೆ ಅಲ್ಲೊಂದು ತಬ್ಬಲಿ ಕೂಸು
ಎದೆಹಾಲಿಗಾಗಿ
ಹಸಿದ ಆ ಕೂಸಿಗೂ ಹಾಲುಣಿಸಬೇಕು ನಾನು
ಎಸೆಯಬೇಡಿ ಬಾಂಬು ಕ್ಷಿಪಣಿಗಳನ್ನು

ಮೊಗ್ಗುಗಳು ಅರಳಲು ಕಾದಿರುವ
ನಮ್ಮ ಹೂದೋಟಗಳ ಮೇಲೆ ಹರಿಸಬೇಡಿ
ಟ್ಯಾಂಕುಗಳನ್ನು
ಒಲುಮೆಯ ಹಾಲುಂಡು ಬೆಳೆದ ಮಗ ಕೇಳಿದ
‘ಯುದ್ಧವೆಂದರೆ ಬರಿ ಕೊಲ್ಲುವುದಷ್ಟೇನಾ ಅಮ್ಮಿಜಾನ್
ನೆನ್ನೆ ಕೊಂದರು ಅಬ್ಬಾಜಾನನನ್ನು
ಇಂದು ನನ್ನನ್ನು ಕೊಲ್ಲುತ್ತಾರೆ
ಅಲ್ಲಿಗೆ ಯುದ್ಧ ಮುಗಿದ ಹಾಗೆ ಅಲ್ಲವೆ!
ನಾಳೆ ನಿನ್ನನ್ನು ಕೊಲ್ಲುವುದಿಲ್ಲವಲ್ಲ!’

## ದೃಶ್ಯ: ಎರಡು

ಕುಸಿದ ಮಸೀದಿಯ ಕೆಳಗೆ ಮೃದುವಾದ ಕೈಯೊಂದು ಸಿಕ್ಕಿತು
ನನಗೆ ಗೊತ್ತು ಅದು ನನ್ನದೇ ಮಗನ ಕೈ
ಆ ಮೃದು ಕೈಗಳಿಂದಲೇ ನನ್ನ ಕೊರಳನ್ನು ತಬ್ಬಿಕೊಂಡು
‘ಅಮ್ಮಿಜಾನ್’ ಎಂದು ಹೂಮಳೆಗರೆಯುತ್ತಿದ್ದ
ಹಸಿದಾಗ ಇದೇ ಕೈಗಳಿಂದ ನನ್ನ ಹುಡುಕಿ
ಎದೆಹಾಲು ಕುಡಿಯುತ್ತಿದ್ದ.